ಕನ್ನಡಪ್ರಭ

**Sunday 28th August 2022, Page No.04**

**Rashtriya Vidyalaya Engineering College Convocation: Graduation Day**

# ಕೌಶಲ ಜತೆ ದೇಶ ನಿರ್ಮಿಸಿ: ರಾಮಮೂರ್ತಿ

## ರಾಷ್ಟ್ರೀಯ ವಿದ್ಯಾಲಯ ಎಂಜಿನಿಯರಿಂಗ್ ಕಾಲೇಜಿನ ಘಟಿಕೋತ್ಸವ | ಪದವಿ ಪ್ರದಾನ

• **ಕನ್ನಡಪ್ರಭ ವಾರ್ತೆ** ಕೆಂಗೇರಿ

ಇಂದಿನ ತಾಂತ್ರಿಕ ಯುಗಕ್ಕೆ ತಕ್ಕಂತೆ ಎಂಜಿನಿಯರ್‌ಗಳು ಸುಧಾರಿತ ಕೌಶಲದೊಂದಿಗೆ ಕಾರ್ಯನಿರ್ವಹಿಸಿ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಮಹತ್ವದ ಪಾತ್ರ ವಹಿಸಬೇಕು ಎಂದು ರಾಜ್ಯಸಭಾ ಮಾಜಿ ಸದಸ್ಯ ಹಾಗೂ ಸಿಎಂಆರ್ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಕೆ.ಸಿ.ರಾಮಮೂರ್ತಿ ಅಭಿಪ್ರಾಯಪಟ್ಟರು.

ಮೈಸೂರು ರಸ್ತೆಯ ರಾಷ್ಟ್ರೀಯ ವಿದ್ಯಾಲಯ ಎಂಜಿನಿಯರಿಂಗ್ ಕಾಲೇಜ್‌ನಿಂದ ಪೂರ್ಣಿಮಾ ಪ್ಯಾಲೇಸ್‌ನಲ್ಲಿ ಆಯೋಜಿಸಿದ್ದ 12ನೇ ಪದವಿ ಪ್ರಧಾನ ಸಮಾರಂಭದಲ್ಲಿ ಪ್ರಮಾಣ ಪತ್ರ ವಿತರಿಸಿ ಅವರು ಮಾತನಾಡಿದರು.

ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆ ತರಲು ಯತ್ನಿಸಿ. ಭಾರತ ರತ್ನ ಸರ್ ಎಂ.ವಿಶ್ವೇಶ್ವರಯ್ಯನವರ ಸಮರ್ಪಣಾ ಭಾವ, ಸಾಮಾಜಿಕ ಬದ್ಧತೆ ಮತ್ತು ಶಿಸ್ತನ್ನು ಯುವ ಎಂಜಿನಿಯರ್‌ಗಳು ರೂಢಿಸಿಕೊಂಡು ಕಾರ್ಯ ಪ್ರವೃತ್ತರಾಗಬೇಕು ಎಂದು ಸಲಹೆ ನೀಡಿದರು.



ಮೈಸೂರು ರಸ್ತೆಯ ರಾಷ್ಟ್ರೀಯ ವಿದ್ಯಾಲಯ ಎಂಜಿನಿಯರಿಂಗ್ ಕಾಲೇಜ್‌ನಿಂದ ಪೂರ್ಣಿಮಾ ಪ್ಯಾಲೇಸ್‌ನಲ್ಲಿ ಪದವಿ ಪ್ರದಾನ ಸಮಾರಂಭ ಆಯೋಜಿಸಲಾಗಿತ್ತು. ಸಿಎಂಆರ್ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಕೆ.ಸಿ.ರಾಮಮೂರ್ತಿ, ಡಾ| ದೇಬಬ್ರತ ದಾಸ್ ಹಾಜರಿದ್ದರು.

ಬೆಂಗಳೂರು ಅಂತಾರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆಯ ನಿರ್ದೇಶಕ ಡಾ| ದೇಬಬ್ರತ ದಾಸ್ ಮಾತನಾಡಿದರು. ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್ ಅಧ್ಯಕ್ಷ ಡಾ. ಎಂ.ಪಿ.ಶ್ಯಾಮ್ ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ್ದರು. ಟ್ರಸ್ಟ್‌ನ ಪದಾಧಿಕಾರಿಗಳಾದ ಎನ್.ಆರ್.ಪಂಡಿತಾರಾಧ್ಯ, ಸಿ.ವಿನೋದ್ ಹಯಗ್ರೀವ, ಡಾ| ಎ.ವಿ.ಎಸ್.ಮೂರ್ತಿ, ಡಿ.ಪಿ.ನಾಗರಾಜ್, ಪ್ರಾಂಶುಪಾಲ ಡಾ| ಕೆ.ಎನ್.ಸುಬ್ರಹ್ಮಣ್ಯ, ಉಪ ಪ್ರಾಂಶುಪಾಲೆ ಡಾ| ಕೆ.ಎಸ್.ಗೀತಾ ಉಪಸ್ಥಿತರಿದ್ದರು.

ಎಂ ಟೆಕ್, ಎಂಸಿಎ ಯ 17 ಹಾಗೂ ಬಿಇ ಯ 12 ಪದವೀಧರರಿಗೆ ಚಿನ್ನದ ಪದಕ ಪ್ರಧಾನ ಮಾಡಲಾಯಿತು. 1455 ಪದವಿ, ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ನೀಡಲಾಯಿತು.